ಸಾಹಿತ್ಯದ ಉಪನ್ಯಾಸಕರಾಗಿದ್ದರು. ಅವರ ಅಣ್ಣ ವಾಸುದೇವರಾವ್ ಇಂಗ್ಲಿಷ್ ಸಾಹಿತ್ಯಪ್ರೇಮಿ ಮತ್ತು ಮಾರ್ಕ್ಸ್‌ವಾದಿ ಆಗಿದ್ದು, ಉಡುಪಿಯ ಭಾರತೀಯ ಜೀವವಿಮಾ ಕಚೇರಿಯಲ್ಲಿ ಗುಮಾಸ್ತರಾಗಿದ್ದರು; ಜೀವವಿಮಾ ನೌಕರರ ಸಂಘದಲ್ಲಿ ಸಕ್ರಿಯರಾಗಿದ್ದರು. ಹಾಗಾಗಿ, ರಾಜಶೇಖರ ಅವರಿಗೆ ಅವರ ಚಿಕ್ಕಂದಿನಿಂದಲೇ ಶಿವರಾಮ ಕಾರಂತರ ಕಾದಂಬರಿ ಮತ್ತಿತರ ಬರಹಗಳನ್ನು ಓದುವುದರ ಅಭ್ಯಾಸದ ಜೊತೆಗೆ ಇಂಗ್ಲಿಷ್ ಮತ್ತು ಜಾಗತಿಕ ಸಾಹಿತ್ಯದಲ್ಲಿಯೂ ಅಭಿರುಚಿ ಮೂಡಿತು; ಮಾರ್ಕ್ಸ್‌ವಾದದ ಪರಿಚಯ ಆಯಿತು. ಬಳಿಕ, ಅವರು ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಪಿಯುಸಿ ಓದುವಾಗ, ಮಣಿಪಾಲದ ಎಂಜಿಎಂ ಕಾಲೇಜಿನಲ್ಲಿ, ಇಂಗ್ಲಿಷ್ ಸಾಹಿತ್ಯದ ಬಿ.ಎ. ಪದವಿಗಾಗಿ ಓದುವಾಗ ಅವರ ಆ ಅಭಿರುಚಿ ಇನ್ನಷ್ಟು ಪಕ್ವಗೊಂಡು, ಆಳವಾಯಿತು.

ಕನ್ನಡ ಸಾಹಿತ್ಯದಲ್ಲಿ ಅವರ ಅಚ್ಚುಮೆಚ್ಚಿನ ಲೇಖಕರು ಶಿವರಾಮ ಕಾರಂತ, ಗೋಪಾಲಕೃಷ್ಣ ಅಡಿಗ, ಯು.ಆರ್. ಅನಂತಮೂರ್ತಿ, ಪಿ. ಲಂಕೇಶ್, ಕೆ.ವಿ. ತಿರುಮಲೇಶ್, ಎ.ಕೆ. ರಾಮಾನುಜನ್, ಮತ್ತು ಗೌರೀಶ ಕಾಯ್ಕಿಣಿ ಅವರು. ಇವರಲ್ಲದೆ ಕೆ.ವಿ. ಸುಬ್ಬಣ್ಣ ಅವರ ಬರಹಗಳ ಬಗ್ಗೆಯೂ, ಅವರು 'ನೀನಾಸಮ್' ಸಂಸ್ಥೆಯನ್ನು ಬೆಳೆಸಿದ ರೀತಿಯ ಬಗ್ಗೆಯೂ ಅವರಿಗೆ ಬಹಳ ಗೌರವವಿತ್ತು. ಕನ್ನಡದ ಇತರ ಅನೇಕ ಹಳೆಯ ಮತ್ತು ಹೊಸ ಲೇಖಕಲೇಖಕಿಯರನ್ನು ಅವರು ಶ್ರದ್ಧೆ ಮತ್ತು ಪ್ರೀತಿಯಿಂದ ಓದಿಕೊಂಡಿದ್ದರು. ಅನಂತಮೂರ್ತಿ, ಲಂಕೇಶ್ ಮತ್ತು ಸುಬ್ಬಣ್ಣನವರೊಂದಿಗಂತೂ ಅವರಿಗೆ ಆಪ್ತವಾದ ವೈಯಕ್ತಿಕ ಸ್ನೇಹ, ಸಂವಾದ ಮತ್ತು ವಾಗ್ವಾದಗಳಿದ್ದವು.

ಇಂಗ್ಲಿಷ್ ಸಾಹಿತ್ಯ ಮತ್ತು ಇಂಗ್ಲಿಷಿನ ಮೂಲಕ ನಮ್ಮಂಥವರನ್ನು ತಲುಪುವ ಜಾಗತಿಕ ಸಾಹಿತ್ಯದಲ್ಲಿ ಅವರ ಅಚ್ಚುಮೆಚ್ಚಿನವರೆಂದರೆ, ಇಂಗ್ಲಿಷ್ ಲೇಖಕ ಜಾರ್ಜ್ ಆರ್ವೆಲ್, ಫ್ರೆಂಚ್ ಲೇಖಕರಾದ ಆಲ್ಬೆ ಕಮೂ ಮತ್ತು ಜ್ಯಾ ಪಾಲ್ ಸಾರ್ತ್ರ್, ಜರ್ಮನ್ ಲೇಖಕರಾದ ಫ್ರಾನ್ಜ್ ಕಾಫ್ಕಾ ಮತ್ತು ವಾಲ್ಟರ್ ಬೆಂಜಮಿನ್, ಅದೇ ಭಾಷೆಯ ಲೇಖಕಿ ಹಾನ್ನಾ ಆರೆಂಡ್ಟ್, ಅಮೆರಿಕನ್ ಭಾಷಾವಿಜ್ಞಾನಿ ಮತ್ತು ಧೀಮಂತ ನೋಅಮ್ ಚೋಮ್‌ಸ್ಕಿ, ಮತ್ತು ಪ್ಯಾಲಿಸ್ತಿನ್ ಮೂಲದ ಅಮೆರಿಕನ್ ಧೀಮಂತ ಎಡ್ವರ್ಡ್ ಸಯೀದ್, ಹಾಗೂ **The Wretched of the Earth** ಹೊತ್ತಿಗೆಯನ್ನು ಬರೆದ ವೆಸ್ಟ್ ಇಂಡಿಯನ್–ಫ್ರೆಂಚ್ ಲೇಖಕ ಇಬ್ರಾಹಿಂ ಫ್ರಾಜ್ ಫ್ಯಾನನ್ (**Ibrahim Franz Fanon**). ಈ ಎಲ್ಲ ಲೇಖಕರನ್ನು ಅವರು ಮತ್ತೆಮತ್ತೆ ನೆನೆದು, ಉದ್ಧರಿಸುತ್ತಿದ್ದರು.

ಇಟಲಿಯ ಇನ್ಯಾತ್ಸಿಯೊ ಸಿಲೋನೆ (**Ignazio Silone**) ಬರೆದ **Fontamara** ಕಾದಂಬರಿ ಅವರನ್ನು ತುಂಬ ಕಲಕಿತ್ತು. ಮುಸ್ಸೊಲಿನಿ ಹುಟ್ಟುಹಾಕಿದ ಫ್ಯಾಸಿಸ್ಟ್ ಮನಃಸ್ಥಿತಿಯು ಇಟಲಿಯ ಹಳ್ಳಿಗಳಲ್ಲಿ ಕಡುಬಡವರಾದ ರೈತಾಪಿ ಜನರನ್ನು ಕೂಡ ಹೇಗೆ ಬಗ್ಗುಬಡಿಯಿತು ಅನ್ನುವುದನ್ನು ಆತ ಕಾಂತಾಸಂಮಿತವಾಗಿ ಬಣ್ಣಿಸಿದ್ದನ್ನು ಮೆಲುಕುಹಾಕುತ್ತ, ಕು.ಶಿ. ಹರಿದಾಸಭಟ್ಟರು ಅದನ್ನು ಸೊಗಸಾಗಿ ಕನ್ನಡಿಸಿದ್ದನ್ನು ಕೃತಜ್ಞತೆಯಿಂದ ನೆನೆಯುತ್ತಿದ್ದರು. ಹಾಗೆಯೆ ಅವರಿಗೆ ಜರ್ಮನ್ ಕವಿ–ನಾಟಕಕಾರ ಬರ್ಟೋಲ್ಟ್ ಬ್ರೆಕ್ಟ್‌ನ ಬರಹಗಳು ಮತ್ತು ಆತನ ಸಾಧನೆ, ಹಾಗೂ ಚಾರ್ಲಿ ಚಾಪ್ಲಿನ್‌ನ ಸಿನಿಮಾಗಳು ಬಹಳ ಇಷ್ಟವಾಗಿದ್ದವು, ದಾರಿದೀಪವೇ ಆಗಿದ್ದವು.

ಲ್ಯಾಟಿನ್ ಅಮೆರಿಕೆಯ ಲೇಖಕರಾದ ಗೇಬ್ರಿಯಲ್ ಗಾರ್ಸಿಯ ಮಾರ್ಕೇಜ್, ಪ್ಯಾಬ್ಲೊ ನೆರೂದಾ, ಜೋರ್ಗೆ ಲೂಯಿ ಬೋರ್ಹೆಸ್, ಎಡ್ವುಆರ್ಡೊ ಗ್ಯಾಲಿಯಾನೋ ಅವರನ್ನೂ ಅವರು ತುಂಬ ಇಷ್ಟಪಡುತ್ತಿದ್ದರು. ಇಂಗ್ಲಿಷ್‌ನಲ್ಲಿ ಬರೆವ ಭಾರತೀಯರ ಪೈಕಿ, ಶಿವ ವಿಶ್ವನಾಥನ್ ಅವರ ವೈಖರಿ ಮತ್ತು ಆಲೋಚನೆಗಳು, ಹಾಗೂ ಅರುಂಧತಿ ರಾಯ್ ಅವರ ಬರಹಗಳು ಅವರನ್ನು ಆಕರ್ಷಿಸುತ್ತಿದ್ದವು. ಆದರೆ, ಅವರ ಅಚ್ಚುಮೆಚ್ಚಿನ ಲೇಖಕರು, ಅವರ ಸಂವೇದನೆಯ ಭಾಗ ಆಗಿಹೋದವರು ಎಂದರೆ ಮೊದಲಿಗೆ ಹೇಳಿದ ಶಿವರಾಮ ಕಾರಂತ ಮತ್ತು ಜಾರ್ಜ್ ಆರ್ವೆಲ್ ಮುಂತಾದ ಲೇಖಕರೇ.

ಅಂತರರಾಷ್ಟ್ರೀಯ ಸಾಹಿತ್ಯ ಮತ್ತಿತರ ಬರಹಗಳನ್ನು ಎಷ್ಟೇ ಓದಿಕೊಂಡಿದ್ದರೂ ಅವರು ತಮ್ಮ ನೆಲವಾದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳ ಜನಜೀವನದಲ್ಲಿ